**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಬನಹಟ್ಟಿ**

**ಸಿ.ಸಿ.ನಂ.223/2024**

1) ಕರ್ನಾಟಕ ಸರಕಾರ

.....ಫಿರ್ಯಾದಿದಾರ

– ವಿರುದ್ಧ –

ಆರೋಪಿ ನಂ.1) ಬಸವರಾಜ ಶಂಕರ ಸಂಕ್ರಟ್ಟಿ
ಸಾಃ ಬನಹಟ್ಟಿ ತಾಃ ರಬಕವಿ ಬನಹಟ್ಟಿ

......ಆರೋಪಿ

**– ಆಪಾದನೆ –**

ನಾನು ಶ್ರೀಮತಿ.ಶುಷ್ಮ ಟಿ.ಸಿ. ಬಿ.ಕಾಂ., ಎಲ್.ಎಲ್.ಬಿ., ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿಗಳು ಬನಹಟ್ಟಿ ತಾ:ರಬಕವಿ-ಬನಹಟ್ಟಿ ಹೊರೆಸುವ ಆಪಾದನೆ ಏನೆಂದರೆ,

ದಿನಾಂಕ 06-07-2023 ರಂದು ಮದ್ಯಾಹ್ನ 01-00 ಗಂಟೆ ಸುಮಾರಿಗೆ ಬನಹಟ್ಟಿ ಪೋಲಿಸ ಠಾಣೆ ಹದ್ದಿಯಲ್ಲಿ ಬರುವ ಬನಹಟ್ಟಿ- ಜಮಖಂಡಿ ರಸ್ತೆಯ ಮೇಲೆ ಬರುವ ಬಂಡಿಗಣಿ ಗ್ರಾಮದ ಬೀರಪ್ಪ ಪೂಜಾರಿ ಇವರ ಜಮೀನದ ಹತ್ತಿರ ಪಿ ಡಬ್ಲೂ ಡಿ ಡಾಂಬರ ರಸ್ತೆಯ ಮೇಲೆ 1 ನೇ ಆರೋಪಿಯಾದ ನೀವು 2 ನೇ ಆರೋಪಿಯ ಮಾಲೀಕತ್ವದ ಮೋಟಾರ ಸೈಕಲನ್ನು ಅಧಿಕೃತ ಚಾಲನಾ ಪತ್ರ ಹೊಂದದೆ, ಬಂಡಿಗಣಿ ಹದ್ದಿಯ ಬೀರಪ್ಪ ಪೂಜಾರಿ ಇವರ ತೋಟದ ಮನೆ ಕಡೆಯಿಂದ ಕಚ್ಚಾ ರಸ್ತೆ ಹಿಡಿದು, ಅತೀ ಜೋರಾಗಿ ಅಲಕ್ಷತನದಿಂದ ಚಲಾಯಿಸಿಕೊಂಡು ಬಂದು, ಜಮಖಂಡಿ ಕಡೆಯಿಂದ ಬನಹಟ್ಟಿ ಕಡೆಗೆ ತನ್ನ ಮೋಟಾರ ಸೈಕಲ ಮೇಲೆ ಹೊರಟ್ಟಿದ್ದ ಚಾಸಾ-1 ರವರ ಅಣ್ಣನಾದ ಸಿಕಂದರಬಾದಶಾ ಪೀರಸಾಬ ನಧಾಪ್ ಇವರ ಮೋಟಾರ ಸೈಕಲಿಗೆ ಹಾಯಿಸಿ ಅಪಘಾತ ಪಡಿಸಿದ್ದು, ಆತನ ಹಣೆಗೆ, ಬಲಗಾಲು ಮೊಳಕಾಲಿಗೆ, ಬಲಭುಜಕ್ಕೆ ಹಾಗೂ ತಲೆಗೆ ಸಾಮಾನ್ಯ ಮತ್ತು ಭಾರಿ ಸ್ವರೂಪದ ಗಾಯ ಒಳಪೆಟ್ಟು ಪಡಿಸಿದ್ದು, ಆತನನ್ನು ಉಪಚಾರಕ್ಕೆಂದು ವಿಜಯಪೂರದ ಸಂಜೀವಿನಿ ಆಸ್ಪತ್ರೆಗೆ ಸೇರಿಸಿದ್ದು, ಉಪಚಾರ ಫಲಿಸದೇ, ಆತನು ದಿನಾಂಕ 07-07-2023 ರಂದು ಸಂಜೆ 07-30 ಗಂಟೆಗೆ ಮರಣ ಹೊಂದುವಂತೆ ಮಾಡಿದ ಅಪರಾಧ ಮಾಡಿದ್ದು, ಆ ಮೂಲಕ 1 ನೇ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ279, 304(ಎ) ಮತ್ತು ಮೋಟಾರ ವಾಹನ ಕಾಯ್ದೆ ಕಲಂ.3 ರೆ/ವು 181 ಅಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಪ್ರಶ್ನೆ-1) ಈಗ ಓದಿ ಹೇಳಲಾದ ಆರೋಪಣೆ ತಿಳಿಯಿತೆ ?
ಉತ್ತರಃ-ತಿಳಿಯಿತು

ಪ್ರಶ್ನೆ-2) ಸದರಿ ಆರೋಪಣೆಯನ್ನು ಒಪ್ಪಿ ಕೊಳ್ಳುವಿರೋ ಅಥವಾ ವಿಚಾರಣೆ ಆಗಲು ಬಯಸುವಿರೊ ?
ಉತ್ತರಃ-ತಪ್ಪಾಯಿತು

ಮೇಲೆ ಹೇಳಲಾದ ಆರೋಪಣೆಯನ್ನು ಆರೋಪಿತನಿಗೆ ತಿಳಿಯುವ ಭಾಷ್ಷೆಯಲ್ಲಿ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಅವರ ಭಾಷೆಯಲ್ಲಿ ಬರೆದುಕೊಳ್ಳಲಾಯಿತು ಎಂದು ದೃಢೀಕರಿಸಲಾಗಿದೆ.

sd/-

ಸ್ಥಳಃ ಬನಹಟ್ಟಿ
ದಿನಾಂಕ ಃ 01-03-2025

ಪ್ರ.ದ.ನ್ಯಾ. ದಂಡಾಧಿಕಾರಿಗಳು ,
ಬನಹಟ್ಟಿ .

1 ನೇ ಆರೋಪಿ ಸಹಿಃ-